# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : ಮೇರಿ ಲೂಯಿ ಬರ್ಕ್
ಸಂಗ್ರಹಾನುವಾದ : ಸ್ವಾಮಿ ವೀರೇಶಾನಂದ

## ಭಾಗ ೩೪

### ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರ ಕಾರ್ಯ - ೨

ಸ್ವಾಮಿ ವಿವೇಕಾನಂದರು ಅಮೆರಿಕಾಗೆ ತಾವು ಬರಿಯ ವೇದಾಂತ ಬೋಧನೆಯ ಉದ್ದೇಶದಿಂದ ಆಗಮಿಸಿದ್ದೇವೆ ಎನ್ನುವುದನ್ನು ನಿರಾಕರಿಸುತ್ತಾರೆ. ೧೮೯೩ರ ನವೆಂಬರ್ ತಿಂಗಳಿನಲ್ಲಿ ಡೆ ಮೊಯಿನ್ಸ್ ನಗರದಲ್ಲಿ ಒಬ್ಬ ಪತ್ರಕರ್ತನಿಗೆ ಅವರು ಹೀಗೆ ಹೇಳುತ್ತಾರೆ: ''(ನಾನು ಅಮೆರಿಕೆಗೆ ಬಂದದ್ದು) ಭಾರತದಲ್ಲಿ ಬಡಜನರಿಗಾಗಿ ಒಂದು ಶಾಲೆಯನ್ನು ತೆರೆಯಲೆಂದು; ಅವರನ್ನು ಪ್ರಸ್ತುತ ದುರದೃಷ್ಟಕರ ಪರಿಸ್ಥಿತಿಯಿಂದ ಉದ್ಧರಿಸಲೆಂದು.'' ಇದಾಗಿ ಮೂರುವರೆ ತಿಂಗಳ ನಂತರ ಅವರ ಈ ಉದ್ದೇಶದಲ್ಲಿ ಎಳ್ಳಷ್ಟೂ ಬದಲಾವಣೆ ಆಗಿರಲಿಲ್ಲ. ಡೆಟ್ರಾಯ್ಟಿನ ಪತ್ರಕರ್ತನೊಬ್ಬ ಹೀಗೆ ಬರೆಯುತ್ತಾನೆ: ''ಸ್ವಾಮಿ ವಿವೇಕಾನಂದರು ತಮಗೆ ತಾವೇ ಹೇಳಿಕೊಳ್ಳುವಂತೆ, ಅವರು ಅಮೆರಿಕಾಗೆ ಬಂದ ಉದ್ದೇಶ ಭಾರತದಲ್ಲಿ ಒಂದು ವಿದ್ಯಾಶಾಲೆಯನ್ನು ಆರಂಭಿಸುವುದೇ ಆಗಿದೆ.'' ಇದಲ್ಲದೆ, ಸ್ವಾಮೀಜಿ ೧೮೯೭ರಲ್ಲಿ ಭಾರತಕ್ಕೆ ಮರಳಿ ಬಂದ ಮೇಲೆ, ತಾವು ಅಮೆರಿಕಾಗೆ ಹೋದ ಉದ್ದೇಶ ಹಿಂದೂಧರ್ಮವನ್ನು ಪ್ರಸಾರಮಾಡುವುದೇನೂ ಆಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ''ನಿಮ್ಮಲ್ಲಿ ಅನೇಕರು ತಿಳಿದುಕೊಂಡಿರುವಂತೆ ನಾನು ವಿಶ್ವಧರ್ಮ ಸಮ್ಮೇಳನಕ್ಕಾಗಿ ಅಮೆರಿಕಾ ದೇಶಕ್ಕೆ ಹೋಗಲಿಲ್ಲ. ನಾನು ಹನ್ನೆರಡು ವರುಷಗಳವರೆಗೆ ಈ ದೇಶದಲ್ಲಿ ಸಂಚರಿಸಿದೆ. ಆದರೆ ನನ್ನ ದೇಶೀಯರಿಗೆ ಸೇವೆ ಮಾಡುವ ಬೇರೆ ದಾರಿ ತಿಳಿಯದೆ ನಾನು ಅಮೆರಿಕಾ ದೇಶಕ್ಕೆ ಹೋದೆ. ಇದು ನನ್ನ ಪರಿಚಯವಿದ್ದ ನಿಮಗೆಲ್ಲರಿಗೂ ಗೊತ್ತಿದೆ. ನನ್ನ ಸ್ವಂತ ದೇಶೀಯರು ಪ್ರತಿದಿನ ಅಧಃಪಾತಾಳಕ್ಕೆ ಇಳಿಯುತ್ತಿದ್ದರು. ಅವರನ್ನು ಯಾರು ಲೆಕ್ಕಿಸಿದರು?''

ವಾಸ್ತವಿಕ ಸಂಗತಿಯೆಂದರೆ, ಭಾರತವನ್ನು ಬಿಟ್ಟು ಹೋಗುವ ಮೊದಲಾಗಲಿ ಅಥವಾ ಅಮೆರಿಕಾದಲ್ಲಿ ತಾವು ಕಳೆದ ಮೊದಲ ವರ್ಷದಲ್ಲಾಗಲಿ, ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿನ ತಮ್ಮ ವೇದಾಂತ ಕಾರ್ಯದ ಬಗ್ಗೆಯಾಗಲಿ, ಪಾಶ್ಚಾತ್ಯ ದೇಶಗಳಲ್ಲಿ ತಾವು ಇಟ್ಟುಕೊಂಡಿರುವ ಯಾವುದೇ ಧಾರ್ಮಿಕ ಯೋಜನೆಯ ಬಗ್ಗೆಯಾಗಲಿ ಯಾವುದೇ ಬರಹಗಳನ್ನು ಬರೆಯಲಿಲ್ಲ; ಅಥವಾ ಮಾತನಾಡಲೂ ಇಲ್ಲ. ಹೌದು, ೧೮೯೩ರ ಫೆಬ್ರವರಿ ತಿಂಗಳಿನಂದು ಅವರು ಹೈದರಾಬಾದಿನಲ್ಲಿ 'ಪಾಶ್ಚಾತ್ಯ ನಾಡುಗಳಲ್ಲಿ ನನ್ನ ಕಾರ್ಯ' ಎಂಬ ವಿಷಯವಾಗಿ ಮಾತನಾಡಿದ್ದರು.



ನಮಗೆ ಸಿಕ್ಕಿರುವ ಅಲ್ಪಸ್ವಲ್ಪ ಮಾಹಿತಿಯ ಪ್ರಕಾರ, 'ಕಾರ್ಯ' ಎಂದರೆ ಅವರ ಪ್ರಕಾರ ಪಾಶ್ಚಾತ್ಯ ದೇಶಗಳಿಗೆ ತೆರಳುವ ಉದ್ದೇಶವಾಗಿತ್ತೇ ಹೊರತು, ಪಾಶ್ಚಾತ್ಯ ದೇಶಗಳಿಗೆ ನೀಡುವ 'ಸಂದೇಶ' ಅಥವಾ 'ಆಧ್ಯಾತ್ಮಿಕ ಬೋಧನೆ'ಯಾಗಿರಲಿಲ್ಲ. ಇಂಗ್ಲಿಷಿನಲ್ಲಿರುವ ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯ ಮೊದಲ ಅವತರಣಿಕೆಯಲ್ಲಿ ಈ ಭಾಷಣದ ಬಗ್ಗೆ ಹೀಗೆ ಉಲ್ಲೇಖವಿದೆ: ''ಅಂತೂ ಕಡೆಯದಾಗಿ ಅವರು ತಮ್ಮ ಕಾರ್ಯದ ಬಗ್ಗೆ ಮಾತನಾಡಿದರು. ಅದೇನೆಂದರೆ, 'ತಾಯಿನಾಡಿನ ಪುನರುದ್ಧಾರ ಮಾತ್ರ; ಅದಕ್ಕಿಂತ ಕಡಮೆಯಾದುದು ಏನೂ ಅಲ್ಲ.' ''

ಆ ಸಮಯದಲ್ಲಿ ಸ್ವಾಮಿ ವಿವೇಕಾನಂದರು ದೂರದ ಪಾಶ್ಚಾತ್ಯದೇಶಗಳಿಗೆ ಭಾರತದ ಸಂದೇಶವಾಹಕನಾಗಿ ಹೋಗುವುದು ಮತ್ತು ವೇದ-ವೇದಾಂತಗಳ ಮಹತ್ವವನ್ನು ಇಡೀ ಜಗತ್ತಿಗೆ ಪರಿಚಯ ಮಾಡಿಕೊಡುವುದು ತಾವು ಮಾಡಲೇಬೇಕಾದ